# ಆಹಾ ಸುದ್ದಿ!

★ ಸಸಿತೋಟ

ಪೆರುವಿನ ಕಡಲ ದಂಡೆಯಲ್ಲಿ ಕಾಂಡೋಮ್ ದಿರಿಸು ತೊಟ್ಟವರು ಫೆಬ್ರುವರಿ 13ರಂದು ಉಚಿತವಾಗಿ ಕಾಂಡೋಮ್‌ಗಳನ್ನು ಹಂಚಿದರು. ಅಂದು ಅಂತರರಾಷ್ಟ್ರೀಯ ಕಾಂಡೋಮ್ ದಿನವಂತೆ. ವ್ಯಾಲೆಂಟೈನ್ ಹಿಂದಿನ ದಿನ ಆಚರಿಸುವುದರ ಔಚಿತ್ಯವನ್ನು ಯಾರೂ ಪ್ರಶ್ನಿಸುವಂತೆಯೇ ಇಲ್ಲ.




ವ್ಯಾಲೆಂಟೈನ್ ದಿನದಂದು ಸಮೀಕ್ಷೆಯೊಂದು ಪ್ರಕಟವಾಗಿದೆ. ಅಮೆರಿಕಾದಲ್ಲಿ ಕಚೇರಿಯಲ್ಲಿ ಕೆಲಸ ಮಾಡುವವರರಲ್ಲಿ ಶೇ. 35ರಷ್ಟು ಮಂದಿಗೆ ಕಚೇರಿಯಲ್ಲೇ 'ಕಚೇರಿ ಪತಿ/ ಪತ್ನಿ' ಇರುತ್ತಾರಂತೆ. ಅಂದರೆ ಸಹೋದ್ಯೋಗಿ ಊಟಕ್ಕೆ ಜೊತೆ ಕೊಡುವುದು, ಅಪ್ಯಾಯಮಾನವಾಗಿ ಮಾತನಾಡುವುದು, ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಮಾಡುತ್ತಾರಂತೆ. ಇಷ್ಟೇ ಆದರೆ ಪರವಾಗಿಲ್ಲ, ಕಚೇರಿ ಪತಿ/ ಪತ್ನಿ ಮನೆಗೂ ಎಂಟ್ರಿ ಕೊಟ್ಟರೆ ವಿಚ್ಛೇದನದ ಬಗ್ಗೆ ಇನ್ನೊಂದು ಸಮೀಕ್ಷೆ ಮಾಡಬೇಕಾದೀತು.

ಬ್ಯಾಂಕಾಕ್‌ನಲ್ಲಿ ವ್ಯಾಲೆಂಟೈನ್ ದಿನದಂದು ಬೌದ್ಧರ ದೇವಾಲಯವೊಂದರಲ್ಲಿ ವಿವಾಹಗಳು ನಡೆದವು. ವಧು- ವರ ಮದುವೆ ಸಂಪ್ರದಾಯದ ಅಂಗವಾಗಿ ಗುಲಾಬಿ ವರ್ಣದ ಶವ ಪೆಟ್ಟಿಗೆಯಲ್ಲಿ ಕೆಲ ಕಾಲ ಮಲಗಿದರು. ದುರದೃಷ್ಟವೆಲ್ಲ ಹೊರಟುಹೋಗಿ ಖುಷಿಯೇ ತುಂಬಿಕೊಳ್ಳುತ್ತದೆ ಎಂಬ ನಂಬಿಕೆಯಂತೆ. ಮದುವೆಯೋ, ಮಸಣವೋ ಎಂಬುದನ್ನು ಒಟ್ಟೊಟ್ಟಿಗೇ ಅನುಭವಿಸುತ್ತಾರೆ ಎನ್ನಬಹುದು.





ಫ್ರಾನ್ಸ್ ಚಿತ್ರ ನಿರ್ಮಾಪಕಿ ಎಲಿಯೊನೇರ್ 'ಲಿಂಗ ಭೇದ' ಕುರಿತು ಹತ್ತೇ ಹತ್ತು ನಿಮಿಷಗಳ ಕಿರು ಚಿತ್ರ ನಿರ್ಮಿಸಿದ್ದಾರೆ. ಇದನ್ನು ಯೂ ಟ್ಯೂಬ್‌ನಲ್ಲಿ 50 ಲಕ್ಷ ಮಂದಿ ವೀಕ್ಷಿಸಿದ್ದಾರಂತೆ. ಪತಿ ಮತ್ತು ಪತ್ನಿ ಸಾಂಪ್ರದಾಯಕ ಕರ್ತವ್ಯಗಳನ್ನು ಅದಲು- ಬದಲು ಮಾಡಿಕೊಳ್ಳುವುದು ಚಿತ್ರದ ವಿಶೇಷವಂತೆ. ಹೆರುವುದಂತೂ ಹೆಂಡತಿಯೇ. ಆದರೆ ಮಗುವನ್ನು ಪಾಲನೆ ಮಾಡುವವ ಗಂಡ ಎಂಬಂತೆ ಚಿತ್ರಿಸಿದ್ದಾರಂತೆ. ಕನಿಷ್ಠ ಸಿನಿಮಾದಲ್ಲಾದರೂ ನೋಡಿ ಖುಷಿಪಟ್ಟುಕೊಂಡರು ವೀಕ್ಷಕರು.

ಮುಂಬೈನಲ್ಲಿ ಎರಡು ರೈಲುಗಳ ಮಧ್ಯೆ ಹಳಿ ದಾಟುವವರ ಮೈ ನಡುಗಿಸುವಂತಹ ಚಿತ್ರ ಬ್ರಿಟನ್ನಿನ 'ದಿ ಟೆಲಿಗ್ರಾಫ್' ನಲ್ಲಿ ಪ್ರಕಟವಾಗಿದೆ. ಅಲ್ಲಿ ನೋಡಿ ಸ್ವದೇಶದಲ್ಲೂ ಹೀಗೆ ಮಾಡಬೇಡಿ ಎಂದು ಶೀರ್ಷಿಕೆಯಲ್ಲಿ ಎಚ್ಚರಿಕೆ ಬೇರೆ. ನಮ್ಮ ಶಾಸಕರು, ಸಂಸದರು, ಸಚಿವರು ವಿದೇಶಕ್ಕೆ ಹೋಗಿ ನೋಡಿ ಹಳಿ ದಾಟುವುದು ಹೇಗೆ ಎಂಬುದನ್ನು ಕಲಿತು ಬರಲು ಒಳ್ಳೆಯ ವಿಷಯ.




ಅಮೆರಿಕಾದ ಓಹಿಯೋದ 41ರ ಹರೆಯದ ಮಹಿಳೆ ಶೀಲಾ ಕ್ರ್ಯಾಬ್‌ಟ್ರೀ ತನ್ನ ಹೆಸರನ್ನು 'ಸೆಕ್ಸಿ' ಎಂದು ಬದಲಾಯಿಸಿಕೊಂಡಿದ್ದಾಳಂತೆ. ಕೋರ್ಟ್‌ನ ನ್ಯಾಯಾಧೀಶರು ಒಪ್ಪಿಗೆ ಸೂಚಿಸಿದ್ದು, ಯಾಕೆಂದು ಕೇಳಿದ್ದಕ್ಕೆ ತನ್ನ ಮೊದಲಿನ ಹೆಸರು ತೀರಾ ಕುರೂಪ ಎಂದು ಹೇಳಿದ್ದಾಳಂತೆ. ಹಿಂದಿಯಲ್ಲಿ ಜನಪ್ರಿಯವಾದ 'ಮೈ ನೇಮ್ ಈಸ್ ಶೀಲಾ... ' ಎಂಬ ಹಾಡು ಕೇಳಿದ್ದರೆ ಹೆಸರು ಬದಲಾವಣೆಗೆ ಮನಸ್ಸು ಮಾಡುತ್ತಿರಲಿಲ್ಲವೇನೋ!